"ಬೇರೆ ಏನಾದ್ರೂ ಬೇಕಾದ್ರೆ ಹೇಳಿ ಸಾರ್."

ಅವನು ರೂಮ್‌ಬಾಯ್ ತರಾ ಕಾಣಿಸಲಿಲ್ಲ. ಸಫಾರಿ ಹಾಕೊಂಡಿದ್ದ, ಭಾಷೆ ಚೆನ್ನಾಗಿತ್ತು. ಲಿಫ್ಟಿನಿಂದ ಈಚೆ ಬಂದ ತಕ್ಷಣ, ಸಲ್ಯೂಟ್ ಮಾಡಿ ಹಿಂದೆಯೇ ಬಂದಿದ್ದ. ರೋಹಿತನಿಗೆ ಅವನು ಸ್ವಲ್ಪ ವಿಚಿತ್ರವಾಗಿ ಕಂಡ. ಏನೋ ಅಸಹಜತೆ ಅವನಲ್ಲಿದೆ ಎನಿಸಿತು.

"ಸದ್ಯಕೆ ಏನೂ ಬೇಡ. ನೀನೇನಾ ಇಲ್ಲಿನ ರೂಮ್‌ಬಾಯ್?"

ರೋಹಿತ್ ತನ್ನ ಬ್ಯಾಕ್‌ಪ್ಯಾಕನ್ನು ಹಾಸಿಗೆಯ ಮೇಲಿಡುತ್ತಾ ಕೇಳಿದ.

"ಹೌದು ಸಾರ್. ಏನಾದ್ರೂ ಬೇಕಾದ್ರೆ ಬೆಲ್ ಮಾಡಿ ಸಾರ್. ಇಲ್ಲೇ ಆಚೆ ಇರ್ತೀನಿ."

ಎಂದವನು ಆಚೆ ಹೋಗದೆ ಅಲ್ಲೇ ನಿಂತಿದ್ದ. ಬಹುಶಃ ಟಿಪ್ಸ್‌ಗೆ ಕಾಯುತ್ತಿರಬಹುದೆಂದು ರೋಹಿತ್ ಹತ್ತರ ನೋಟೊಂದನ್ನು ಅವನ ಕೈಗಿಡಲು ಹೋದ.

"ಸಾರಿ, ಸಾರ್. ನಾನು ಟಿಪ್ಸ್ ತಗೊಳ್ಳಲ್ಲ."

ಅವನ ಮಾತಿಗೆ ರೊಹಿತ್ ಅಚ್ಚರಿಯಿಂದ ನೋಡಿದ. ಇಂತಹವರೂ ಉಂಟೆ?

"ಸರಿ, ನೀನಿನ್ನು ಹೋಗು. ನನಗೆ ತುಂಬಾ ಸುಸ್ತಾಗಿದೆ. ಮಲಗಿದರೆ ಸಾಕು ಅನ್ನಿಸ್ತಾ ಇದೆ."

"ಸಾರ್, ನೋಡೋಕೆ ಒಳ್ಳೆಯವರ ಹಾಗೆ ಕಾಣ್ತಿದ್ದೀರ. ಒಂದು ಮಾತು ಹೇಳ್ತೀನಿ, ತಪ್ಪು ತಿಳೀಬಾರದು."

"ಸರಿ ಅದೇನೋ ಬೇಗನೆ ಹೇಳಿ ಹೋಗು. ನಾನಿನ್ನೂ ಸ್ನಾನ ಮಾಡಿ ಮಲಗಬೇಕು."

"ಏನಿಲ್ಲಾ ಸಾರ್, ರೂಮು ಬದ್ಲಾಯಿಸ್ಕೊಂಡ್ಬಿಡಿ."

"ಯಾಕೆ? ಈ ರೂಮಿಗೇನಾಗಿದೆ?"

"ಏನಿಲ್ಲ ಸಾರ್, ಹೋದ ತಿಂಗಳು ಈ ರೂಮಲ್ಲಿ ಒಬ್ಬ ಆತ್ಮಹತ್ಯೆ ಮಾಡಿಕೊಂಡಿದ್ದ, ಅದಕ್ಕೆ."

ಅವನ ಮಾತಿಗೆ ರೋಹಿತನಿಗೆ ಆ ಕ್ಷಣ ಏನೂ ಅನ್ನಿಸಲಿಲ್ಲ.

"ಹೋಟೆಲ್ ಅಂದ್ರೆ ಇಂತಾವೆಲ್ಲಾ ಇದ್ದೇ ಇರುತ್ತೆ. ಎಲ್ಲ ಮನೆಗಳಲ್ಲೂ ಜನ ಸಾಯ್ತಾರೆ. ಹಾಗಂತ ಮನೆಯಲ್ಲಿರೋರು ಮನೇನ ಬಿಟ್ಬಿಡೋಕಾಗುತ್ತಾ? ನನಗೇನೂ ಹೆದ್ರಿಕೆ ಇಲ್ಲ. ನೀನು ಹೋಗು."

ರೋಹಿತ್ ತುಂಬು ಆತ್ಮಸ್ಥೈರ್ಯದಿಂದ ಹೇಳಿದ.

"ಇನ್ನೊಂದ್ಸಲ ಯೋಚ್ನೆ ಮಾಡಿ ಸಾರ್. ಆತ್ಮಹತ್ಯೆ ಮಾಡ್ಕೊಂಡವನು ದೆವ್ವ ಆಗಿದ್ದಾನೆ ಅಂತ ಹೋಟೆಲಿನವರು ಹೇಳ್ತಾ ಇದ್ದಾರೆ."

"ಏನು? ದೆವ್ವವೆ? ಅವೆಲ್ಲಾ ಇದೇಂತ ನಂಬೋ ಜನ ಇರೋತನಕ ಇವೆಲ್ಲಾ ಇದ್ದದ್ದೇ. ನನಗಂತೂ ದೆವ್ವ ಭೂತಗಳ ಬಗ್ಗೆ ನಂಬಿಕೇನೂ ಇಲ್ಲ, ಹೆದರಿಕೇನೂ ಇಲ್ಲ. ಅಕಸ್ಮಾತ್ ದೆವ್ವ ಇದ್ದರೂ ನನಗೂ ಅದಕ್ಕೂ ಏನೇನೂ ಸಂಬಂಧ ಇಲ್ಲವಲ್ಲ? ಅದು ನನ್ನನ್ನೇನೂ ಮಾಡೊಲ್ಲ. ಅದ್ನೆಲ್ಲಾ ಮನಸ್ಸಿಗೆ ಹಾಕ್ಕೊಳ್ಳೋವಷ್ಟು ಟೈಮಿಲ್ಲ. ನೀನು ಹೋಗು."

"ಸಾರ್?..."

"ಅಯ್ಯೋ ಹೋಗಪ್ಪಾ. ದೆವ್ವ ಕಾಣಿಸಿದ್ರೆ ನಿನ್ನನ್ನೇ ಕರೀತೀನಿ. ನಿಂದು ನೈಟ್‌ಶಿಫ್ಟ್ ಅಲ್ವಾ?"

"ಹೂ ಸಾರ್, ಬೆಳಗಿನ ತನಕ ಇಲ್ಲೇ ಇರ್ತೀನಿ. ಯಾವಾಗ್ಬೇಕಾದ್ರೂ ನನ್ನ ಕರೀರಿ. ನನಗೆ ನಿದ್ರೆ ಹೆಚ್ಚೆ ಬರೊಲ್ಲ. ಇಲ್ಲೇ ಲಿಫ್ಟ್ ಹತ್ರ ಕೂತಿರ್ತೀನಿ."

ಆತ ಮನಸ್ಸಿಲ್ಲದ ಮನಸ್ಸಿನಿಂದ ಬಾಗಿಲ ಬಳಿ ನಿಂತಾಗ ರೋಹಿತ್ ಕೇಳಿದ:

"ನಿನ್ನ ಹೆಸರೇನೆಂದೆ?"